**ಮಲಯಾಳಂ ಮೂಲ: ಶಿಹಾಬುದ್ದೀನ್ ಪೊಯ್ತುಂಕಡವು**
**ಕನ್ನಡಕ್ಕೆ: ಸುನೈಫ್**

ಕಲೆ: ಮುರಳೀಧರ ರಾಠೋಡ್

# ಮಮ್ಮುಮುಕ್ರಿ

ಕಣ್ಣುಗಳು ಅವನನ್ನು ಕಾಣಲಾರವು
ಆದರೆ ಅವನು ಕಣ್ಣುಗಳನ್ನು ಕಾಣಬಲ್ಲನು.

(ಕುರಾನ್ 6:103)

ನಸುಕಿನಲ್ಲಿ ಬಿದ್ದ ಆ ಕನಸಿನಿಂದಾಗಿ ಮನಸು ಹಾಳಾಯಿತು. ಕೆಸರು, ಮಲ ಮೂತ್ರ ತುಂಬಿದ ಸೆಲ್ಲಿನೊಳಗೆ ಮಮ್ಮುಮುಕ್ರಿ ಬಿದ್ದು ಹೊರಳಾಡುತ್ತಿದ್ದಾರೆ.

ನರನಾಡಿಗಳಿಂದ, ಬೆರಳ ತುದಿಯಿಂದ ನಿಧಾನಕ್ಕೆ ದೇಹವನ್ನೇ ಎತ್ತಿ ಒಗೆದು ಪ್ರಾಣ ದೇಹದಿಂದ ದೂರಕೆ, ಸೆಲ್ಲಿನಾಚೆಗೆ ಹಾರುತ್ತಿದೆ...

ಬಹಳ ದಿನಗಳಿಂದ ಮಮ್ಮುಮುಕ್ರಿಯನ್ನು ಮರೆತೇ ಬಿಟ್ಟಿದ್ದ ನನ್ನನ್ನು ಕನಸೊಂದು ಬಂದು ಎಚ್ಚರಿಸಲು ಕಾರಣ ಏನಿರಬಹುದು?

ಈ ಮುಕ್ರಿಯನ್ನು ಹಾಗೆಲ್ಲ ಸುಲಭದಲ್ಲಿ ಮರೆತು ಬಿಡುವ ಹಾಗಿಲ್ಲ. ಆಲಂಚೇರಿ ಜಮಾಅತ್ ಮಸೀದಿಯ ಬರಿಯ ನೀರುಗೋರುವ ಮುಕ್ರಿ ಅಲ್ಲ. ಬಳಪದಲ್ಲಿ ಅಕ್ಷರದ ದಾರಿ ತೋರಿದ ಉಸ್ತಾದ್ ಅವರು. ಉಸ್ತಾದ್ ಹತ್ತಿರ ಬಂದರೆ ಚಂದನದೆಣ್ಣೆಯ ಗಂಧ ಪರಿಸರವೆಲ್ಲ ತುಂಬುತ್ತಿತ್ತು. ಗಂಜಿಯಲ್ಲಿ ಅದ್ದಿದ ಬಿಳಿ ಬಟ್ಟೆಯಿಂದ ಸಂಗೀತ ಹೊಮ್ಮುತ್ತಿತ್ತು. ಮದರಸದ ಒಂದನೇ ತರಗತಿಯಲ್ಲಿ ಅಪರಿಚಿತ ಮುಖಗಳ ನಡುವೆ ಅಳುತ್ತಾ ನಿಂತಾಗ ಬಳಿ ಬಂದು ಸಾಂತ್ವನದ ಸಿಹಿ ಉಣಿಸಿದ ಕೈ ಅದು. ಅಳುತ್ತಿದ್ದ ಮಕ್ಕಳಿಗೆಲ್ಲ ಉಸ್ತಾದ್ ಪಿಸುಮಾತಿನಲ್ಲೆಂಬಂತೆ ಹೇಳಿದರು:

"ನಿಮಗೆಲ್ಲ ಚೆಂದ ಚೆಂದದ ಚಿತ್ರ ಬಿಡಿಸಿ ಕೊಡ್ತೇನಿ ಆಯ್ತಾ. ಕಾಗೆ ಚಿತ್ರ, ಕೋಗಿಲೆ ಚಿತ್ರ, ಒಂಟೆ ಚಿತ್ರ, ಯೇಸುಕ್ರಿಸ್ತನ ಚಿತ್ರ..."

ಹೇಳಿದಂತೆ ಚಿತ್ರವನ್ನು ಬಿಡಿಸಿಯೂ ಕೊಟ್ಟರು. ಅಳುವಿನ ಸ್ವರ ತುಂಬಿದ್ದ ತರಗತಿಯಲ್ಲಿ ಈಗ ಕಿಲಕಿಲ ನಗು.

ನನಗೀಗಲೂ ನೆನಪಿದೆ, ಪಕ್ಕದ ಬೆಂಚಿನ ಆಮಿನಾಳಿಗೆ ಬಿಡಿಸಿ ಕೊಟ್ಟ ಚಿತ್ರ ನೋಡಿ ಅವಳು ಅಳು ಮತ್ತು ನಗುವಿನ ನಡುವೆ ನಾಚಿ ಮುಖ ಮುಚ್ಚಿಕೊಂಡಿದ್ದಳು. ಬರೀ ನಾಲ್ಕೈದು ಗೆರೆಗಳಲ್ಲಿ ಚಿತ್ರಗಳಿಗೆ ಜೀವ ತುಂಬುತ್ತಿದ್ದರು ಉಸ್ತಾದ್. ಈ ನಡುವೆ ಅಳದೇ ಕೂತಿದ್ದ ಮಕ್ಕಳೂ ಹಟ ಹಿಡಿಯತೊಡಗಿದ್ದರು: